ಸುಲೇಖನನ್ನ ಅವಚಿ ಹಿಡಿದಿದ್ದ ವೈಷ್ಣವಿ ನಂತರದಲ್ಲಿ ಅವನ ಖಾಸಗಿ ಬದುಕು ತನ್ನ ದೇಖರೇಕಿಯಲ್ಲೇ ನಡೆಯುವಂತೆ ಮಾಡಿಕೊಂಡಿದ್ದಳು. ಆಗಾಗ ಒಸರುತ್ತಿದ್ದ ಸರಸ, ಪ್ರೀತಿ, ಕಾಳಜಿಯ ಲೇಪನದ ಮಾತುಗಳು ಸುಳ್ಳೇ ಎನ್ನುವಂತೆ ವ್ಯಕ್ತಿತ್ವವನ್ನ ಮೂದಲಿಸುವ ಬಿರುಸಾದ ಚುಚ್ಚು ಮಾತು, ತಾನು ಕಲ್ಪಿಸಿಕೊಂಡದ್ದನ್ನು ಸತ್ಯವಾಗಿಸುವ ಠೇಂಕಾರ ಇವೆಲ್ಲ ಸುಲೇಖನನ್ನು ದಿಗ್ಭ್ರಾಂತಗೊಳಿಸುತ್ತಿದ್ದವು. ಅಪ್ಪನ ಪತ್ರ ಬಂದರೆ ಕೊತಕೊತ ಕುದಿವ ಆಕೆ ತನ್ನ ಅಪ್ಪಅಮ್ಮನ ಜೊತೆ ಮೊಬೈಲ್‌ನಲ್ಲಿ ದಿನಕ್ಕೆ ಒಮ್ಮೆಯಾದರೂ ಮಾತನಾಡುತ್ತಿದ್ದಳು. ಅದನ್ನ ಪ್ರಶ್ನಿಸಿದರೆ ನೂರೆಂಟು ಪ್ರತಿ ಮಾತುಗಳು. ಯು.ಕೆ.ಗೆ ಹೋದ ನಂತರವಂತೂ ಅವಳ ಮಾನಸಿಕತೆಯೇ ಬದಲಾಗಿಬಿಟ್ಟಿತ್ತು. ತನ್ನ ಹಿಂದಿನ ಬದುಕನ್ನು ನೆನಪುಗಳ ಸಮೇತ ಕಿತ್ತುಹಾಕುವ ತೆರದಲ್ಲಿನ ಅವಳ ವರ್ತನೆಗಳ ಅರಿವು ಸುಲೇಖನಿಗೆ ಆಗುತ್ತಿತ್ತು. ತಾನು ತಿಳಿದ ವೈಷ್ಣವಿಯೊಳಗೆ ಬೇರೆಯದೇ ಆದ ಮತ್ತೊಬ್ಬಳಿದ್ದಾಳೆ ಎನ್ನುವ ನಿಜ ಅವನನ್ನು ನಿಸ್ತೇಜವಾಗಿಸುತ್ತಿತ್ತು. ಯಾರದ್ದು ಸರಿ, ಯಾರದ್ದು ತಪ್ಪು? ಎಂದು ನಿಷ್ಕರ್ಷೆ ಮಾಡಲಾಗದ ಹತಾಶೆಯಲ್ಲಿ ನಿತ್ಯ ಬೇಯುತ್ತಿದ್ದ. ಒಂದೆಡೆ ತಾನಾಗಿಯೇ ದೂರಮಾಡಿಕೊಂಡ ಅಪ್ಪಅಮ್ಮ, ಊರು, ಇನ್ನೊಂದೆಡೆ ತನ್ನ ಜಾಡಿನಲ್ಲೇ ಸಾಗಬೇಕು ಎನ್ನುವ ಪತ್ನಿಯ, ದುಡಿಯುವ ಸಂಸ್ಥೆಯ ಧೋರಣೆ. ಇವೆಲ್ಲದರ ನಡುವೆ ವೈಷ್ಣವಿಯಂತೆಯೇ ತನಗೂ ಮೇಲ್ನೋಟದ ಮುಖಕ್ಕಿಂತ ಗೋಚರವಾಗದ ಮತ್ತೊಂದು ಮುಖವಿದೆ ಎಂದು ಸುಲೇಖನಿಗೆ ಅನ್ನಿಸತೊಡಗಿತ್ತು. ತನ್ನದಾದ ನಿಜಮುಖ ಕಳೆದುಹೋಗಿದೆ, ಹುಡುಕಿ ಮತ್ತೆ ಪಡೆಯಬೇಕು ಎನ್ನುವ ಹಂಬಲ ತುಸು ಕಾಲ ಆಗಿ, ಹಾಗೇ ಮರೆಯಾಗಿಬಿಡುತ್ತಿತ್ತು.

ಕಳೆದ ಎಂಟು ವರ್ಷಗಳಲ್ಲಿ ಒಮ್ಮೆ ಮಾತ್ರ ಮನೆಗೆ ಬಂದು ಅಪ್ಪಅಮ್ಮನನ್ನು ನೋಡಿದ್ದ ಸುಲೇಖನಿಗೆ ನಂತರದಲ್ಲಿ ವೈಷ್ಣವಿಯ ಮೂದಲಿಕೆಯನ್ನ ಅರಗಿಸಿಕೊಳ್ಳಲು ವರ್ಷಗಳೇ ಹಿಡಿದಿದ್ದವು. ಸುಲೇಖನ ಪೂರ್ವಾಪರದ ಬಗ್ಗೆ ಆಕೆಗೆ ಅದ್ಯಾವ ಸಿಟ್ಟೋ. ತಾತ್ಸಾರವೋ, ಅಸಹನೆಯೋ? ಅದು ಸ್ಫೋಟಿಸಿದಾಗೆಲ್ಲ 'ಇವಳು ಹೆಣ್ಣೇ?' ಎನ್ನುವ ಅನುಮಾನವಾಗುತ್ತಿತ್ತು. ಮರೆತುಹೋಗಿದೆ ಎಂದು ಭಾವಿಸಿಕೊಂಡ ನೆನಪುಗಳೆಲ್ಲ ನಿದ್ರೆಯಲ್ಲಿ ಕನಸಾಗಿ ಪ್ರತ್ಯಕ್ಷವಾಗಿಬಿಡುತ್ತಿದ್ದವು. ಹೇಳಲಾಗದ, ವಿವರಿಸಲಾಗದ ಅನುಭೂತಿಯಾದ ಅವುಗಳಿಂದ ಸುಲೇಖ ಮತ್ತಷ್ಟು ಒದ್ದಾಡಿಬಿಡುತ್ತಿದ್ದ.

ಅಮ್ಮ ತೀರಿಹೋದ ವಿಷಯ ತಿಳಿದದ್ದು ಬೆಂಗಳೂರಿನಲ್ಲಿದ್ದ ಸ್ನೇಹಿತನಿಂದ. ಕೋವಿಡ್ ಸಂದರ್ಭದಲ್ಲಿನ ಫೋಟಾವಳಿಯಲ್ಲಿ ಸುಲೇಖನ ಊರಿನ ಯಾರೋ ಪರಿಚಿತರಿಂದ ತಿಳಿದ ಸುದ್ದಿಯನ್ನು ಆತ ಸುಲೇಖನಿಗೆ ರವಾನಿಸಿದ್ದ. ಸುದ್ದಿ ತಿಳಿದ ಒಂದೆರಡು ದಿನ ಸುಲೇಖ ಮಂಕಾಗಿಬಿಟ್ಟಿದ್ದ. ಹತ್ತಿರವಾದದ್ದು ಕಳೆದುಹೋದ ಕಳವಳ ಅವನನ್ನು ಇನ್ನಿಲ್ಲದಂತೆ ಕಾಡುತ್ತಿತ್ತು. ಅವನ ಅನ್ಯಮನಸ್ಕತೆ ಗಮನಿಸಿದ ವೈಷ್ಣವಿ ವಿಷಯ ತಿಳಿದು, 'ಎಲ್ಲರೂ ಒಂದಲ್ಲ ಒಂದು ದಿನ ಹೋಗೋರೆ, ಅದಕ್ಯಾಕೆ ಇಷ್ಟೆಲ್ಲ ಬೇಸರ?' ಎಂದು ಹಗುರವಾಗಿ ಮಾತನಾಡಿದ್ದಳು. ಆ ಸಂಕಟದಲ್ಲೂ ಮೈ ಉರಿದುಹೋಗಿತ್ತು. ಪ್ರತಿಭಟಿಸುವ ಶಕ್ತಿ ತನ್ನಲ್ಲಿ ಕುಂದಿಹೋಗಿದೆ ಎಂದು ಸುಲೇಖನಿಗೆ ಅನ್ನಿಸುತ್ತಿತ್ತು. ಯಾಕಾಗಿ? ಹೇಗೆ? ಎನ್ನುವ ಪ್ರಶ್ನೆಗಳು ಹುಟ್ಟಿದರೂ ಉತ್ತರವಿರಲಿಲ್ಲ. ಯಾರಲ್ಲೂ ಹೇಳಿಕೊಳ್ಳಲಾಗದ, ಅನುಭವಿಸಲಾಗದ ಒಳವೇದನೆ ಅವನನ್ನು ಸುಡುತ್ತಿತ್ತು. ಭಾರತಕ್ಕೆ ಬಂದ ನಂತರವೂ ಊರಿಗೆ ಬಂದು ಅಪ್ಪನಿಗೆ ಮುಖ ತೋರಿಸಲು ಅಪರಾಧಿ ಮನಸ್ಸು ಹಿಂಜರಿಕೆ ಹುಟ್ಟಿಸುತ್ತಿತ್ತು; ಅಷ್ಟರ ಮೇಲೆ ವೈಷ್ಣವಿಯ ಬಿಗಿಹಿಡಿತ. ಈಗ ಅಪ್ಪನಿಗೆ ಹುಷಾರಿಲ್ಲದೇ ಆಸ್ಪತ್ರೆ ಸೇರಿದ್ದಾನೆ ಎನ್ನುವುದನ್ನು ತಿಳಿದಾಗ ಸಹಿಸಲಾಗದೇ ಬಂದಿದ್ದ. ವೈಷ್ಣವಿಯ ಅಡ್ಡಿ, ಘಾಸಿ ಮಾತುಗಳನ್ನು ಲೆಕ್ಕಿಸದೇ ಬಂದಿದ್ದರೂ ಬೆನ್ನು ಹಿಡಿದ ಶನಿಯಂತೆ ಅವಳಿಂದ ಅರ್ಧಗಂಟೆಗೊಮ್ಮೆ ಕರೆ, ಮೆಸೇಜ್ ಬರುತ್ತಿತ್ತು. ಅವಳ ಮೂದಲಿಕೆ, ಕಿರಿಕಿರಿಗೆ ಬೇಸತ್ತು ಅವ್ಯಾವುದನ್ನೂ ಸ್ವೀಕರಿಸುತ್ತಲೇ ಇರಲಿಲ್ಲ.

ಡಾಕ್ಟರನ್ನು ಭೇಟಿಯಾಗುವವರ ಸರದಿ ಸಾಲು ಇನ್ನೂ ಉದ್ದಕ್ಕಿತ್ತು. ಹೊರಗಿನಿಂದ ಬಂದ ಸಾಂಬಮೂರ್ತಿ ದೂರದಿಂದಲೇ ಸುಲೇಖನನ್ನು ನೋಡಿದರು. ಮುದುಡಿಕುಳಿತು, ತಲೆಯನ್ನು ಸೀಟಿನ